ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 1007/2018

CW ( 25 ) PW ( 04 )

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕಃ 17-11-2025

| | |
|---|---|
| ಸಾಕ್ಷಿದಾರರ ಹೆಸರು | ಭೀಮಣ್ಣ |
| ತಂದೆ ಹೆಸರು | ಮಾರುತಿ ಸೂರಿ |
| ವಯಸ್ಸು | 48 ವರ್ಷ |
| ಉದ್ಯೋಗ | ಪಿ ಐ, ತರಬೇತಿ ಶಾಲೆ, ಖಾನಪೂರ |
| ವಾಸಸ್ಥಳ | ಖಾನಾಪೂರ |

## ಮುಖ್ಯ ವಿಚಾರಣೆಃ ಸಸಅ ರವರಿಂದಃ

ನಾನು 17-10-2016 ರಿಂದ 17-08-2019 ರವರೆಗೆ ಕೊಪ್ಪಳ ಗ್ರಾಮೀಣ ಠಾಣೆಯಲ್ಲಿ ಸಿ ಪಿಐ ಯಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ 17-02-2018 ರಿಂದು ಚಾಸಾ 24 ರವರಿಂದ ಪಡೆದ ಮುಂದಿನ ತನಿಖೆಯನ್ನು ಮಾಡಿರುತ್ತೇನೆ. ಅದೇದಿನ ಚಾಸಾ 24 ರವರನ್ನು ಶವ ಪಂಚನಾಮೆಯ ಕುರಿತು ಜಿಲ್ಲಾ ಅಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಚಾಸಾ 8 ರಿಂದ 18 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಗುನ್ನ ಜಾಗಕ್ಕೆ ಭೇಟಿ ನೀಡಿ ಚಾಸಾ 2 ಮತ್ತು 3 ರವರ ಸಮಕ್ಷಮ ಚಾಸಾ 17 ರವರು ತೋರಿಸಿದಂತೆ ಸಂಜೆ 04.00 ರಿಂದ 05.00 ರ ಅವಧಿಯಲ್ಲಿ ಪಂಚನಾಮೆಯನ್ನು ಮಾಡಿರುತ್ತೇವೆ. ಸದರಿ ಪಂಚನಾವೆಯನ್ನು ಈಗಾಗಲೆ ನಿಪಿ-4 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 4 ಸಿ ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ 2 ಪೋಟೊಗಳನ್ನು ನೋಡಿ ಗುರುತಿಸಿರುತ್ತಾರ. ಅದೇ ಚಾಸಾ 4 ರವರು ಶವ ಪಂಚನಾಮೆಯ ವರದಿಯನ್ನು ಚಾಸಾ 7 ರವರ ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿರುತ್ತದೆ. ಚಾಸಾ 7 ರವರ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 15 ಎಂದು ಗುರುತಿಸಲಾಯಿತು. ದಿಃ 20-02-2018 ರಂದು ವಾಹನದ ಮಾಲಿಕರಿಗೆ ಕಲಂ 133 ರ ನೋಟಿಸ್ ನ್ನು ನೀಡಿ ಉತ್ತರವನ್ನು ಪಡೆದುಕೊಂಡಿರುತ್ತೇನೆ. ಸದರಿ ನೋಟಿಸ ಮತ್ತು ಉತ್ತರವನ್ನು ನಿಪಿ 16 ಮತ್ತು 17 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 16-ಎ ಮತ್ತು 17-ಎ ಎಂದು ಗುರುತಿಸಲಾಯಿತು. ಆರೋಪಿಯ ಸ್ವಖುಷಿ ಹೇಳಿಕೆಯನ್ನು ಪಡೆದು ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನ. ಚಾಸಾ 1, 7 ರಿಂದ 18 ರವರ ಪುರವಣೆ ಹೇಳಿಕೆಗಳನ್ನು ಪಡೆದಿರುತ್ತೇನೆ. ದೀ 22-02-2018 ರಂದು ಈ ಪ್ರಕರಣ ವಾಹನವನ್ನು ಇಂಡನಿಮಿಟಿ ಬಾಂಡ ಪಡೆದು ಬಿಡುಗಡೆ ಮಾಡಿರುತೇನ. ಮೃತಳ ಪಿ ಎಂ

ವರದಿಯನ್ನು ಪಡೆದುಕೊಂಡಿದ್ದು, ಅದನ್ನು ಈಗಾಗಲೆ ನಿಪಿ 3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ3 ಎ ಎಂದು ಗುರುತಿಸಲಾಯಿತು. ದಿಃ 13-03-2018 ರಂದು ಐ ಎಂ ವಿ ವರದಿಯನ್ನು ಕೇಳಿ ಪಡೆದಿದ್ದು ಅದನ್ನು ನಿಪಿ 18 ಎಂದು, ಸಾಕ್ಷಿಯ ಸಹಿಯನ್ನು ನಿಪಿ 18 ಎ ಎಂದು ಗುರುತಿಸಲಾಯಿತು. ದಿಃ 16-04-2018 ರಂದು ಈ ಪ್ರಕರಣದ ಗಾಯಳುಗಳಾದ ಚಾಸಾ 8 ರಿಂದ 13, 15 ಮತ್ತು 16 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ಅವುಗಳನ್ನು ನಿಪಿ 19 ರಿಂದ 26 ಎಂದು ಸಾಕ್ಷಿಯ ಸಹಿಗಳನ್ನು ನಿಪಿ 19 ಎ ರಿಂದ 26 ಎ ಎಂದು ಗುರುತಿಸಲಾಯಿತು. ನಂತರ ಆರೋಪಿಗಳ ವಿರುದ್ಧ ಅಪರಾಧ ಸಾಬೀತಾದ ಕಾರಣ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಎಲ್ಲಾ ಸಾಕ್ಷಿದಾರರ ಹೇಳಿಕೆಗಳನ್ನು ಅಸ್ಪತ್ರೆಯಲ್ಲಿ ತೆಗೆದುಕೊಂಡಿರುತ್ತೇನೆ. ಈ ಪ್ರಕರಣದ ಎರಡು ವಾಹನಗಳನ್ನು ನೋಡಿರುತ್ತೇನೆ. ಫಿರ್ಯಾದಿಯ ವಾಹನಕ್ಕೆ ಬಲಭಾಗದಲ್ಲಿ, ಆರೋಪಿಯ ವಾಹನಕ್ಕೆ ಎಡಭಾಗದಲ್ಲಿ ಜಾಕಂಗೊಂಡಿತ್ತು. ಅರೋಪಿಯ ವಾಹನಕ್ಕೆ ಬಂಪರ್ ಹೊಡೆದುಹೋಗಿತ್ತು. ಫಿರ್ಯಾದಿಯ ವಾಹನಕ್ಕೆ ವಿಂಡ್ ಸೀಡ್ ಗ್ಯಾಸ್ ಜಕಾಂಗೊಂಡಿತ್ತು. ಅಪ್ಪ ವಾಹನದ ಮುಂಬದಿಯ ಬಲಭಾಗ ಜಾಕಂಗೊಂಡಿತ್ತು ಎಂದರೆ ಸರಿ. ವಾಹನಗಳು ಎದುರುಬದುರಾಗಿ ಇಕ್ಕಿ ಪಡಿಸಿಕೊಂಡಾಗ ಮೇಲೆ ಹೇಳಿದ ರೀತಿಯಲ್ಲಿಜಾಕಂಗೊಳ್ಳಬಹುದು ಎಂದರೆ ಸಾಕ್ಷಿಯು ಯಾವ ರೀತಿಯಿಂದ ಅಘಾತವಾಗಿರುತ್ತದೆ ಎಂದು ನೋಡಿ ಹೇಳಬಹುದು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಗುನ್ನ್ಹಜಾಗಕ್ಕೆ ಭೇಟಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಿಃ **17-02-2018** ರಂದು ಗುನ್ನ್ಹಜಾಗಕ್ಕೆ ಭೇಟಿ ನೀಡಿದ್ದೇನು. ಗುನ್ನ್ಹಜಾಗದ ರಸ್ತೆ **2018** ರಲ್ಲಿ ಸಾಕಷ್ಟು ತೆಗ್ಗು ಗುಂಡಿಗಳಿಂದ ತುಂಬಿದ ರಸ್ತೆಯಾಗಿತ್ತು ಎಂದರೆಸರಿ. ಅಲ್ಲಿ ಯಾವುದೇ ವಾಹನಗಳು ವೇಗವಾಗಿ ಚಲಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆಗಳನ್ನು ಪಡೆಯದೇ ಇದ್ದರೂ ಸಹ ನಾನು ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ಗುನ್ನ್ಹಜಾಗದ ಕಚ್ಚಾ ನಕಾಶೆಯನ್ನು ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಗುನ್ನ್ಹಜಾಗಕ್ಕೆ ಭೇಟಿ ನೀಡಿರುವುದಿಲ್ಲ. ದೂರುದಾರ ತನ್ನ ತಪ್ಪಿನಿಂದ ವಾಹನವನ್ನು ಪಲ್ಟಿಮಾಡಿಕೊಂಡು ಪರಿಹಾರ ಪಡಯುವ ಉದ್ದೇಶದಿಂದಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಗಾಯಾಳುಗಳ ಪ್ರಮಾಣ ಪತ್ರವನ್ನು ಪಡೆಯಲು ಮನವಿಪತ್ರವನ್ನು ಸಲ್ಲಿಸಿದ್ದೇನು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಜಿಲ್ಲಾ ಅಸ್ಪತ್ರೆಗೆ ಯಾವುದೇ ಮನವಿ ಪತ್ರವನ್ನು ಸಲ್ಲಿಸದೇ ಇದ್ದರೂ ಸಹ ನಾನು ಮನವಿ ಪತ್ರ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆಸರಿಯಲ್ಲ. ನಾನು ವೈದ್ಯಾಧಿಕಾರಿಗ ಜೊತೆಗೂಡಿ ಸುಳ್ಳು ಗಾಯದ ಪತ್ರಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ **7** ರಿಂದ **18** ರವರ ಪುರವಣಿ ಹೇಳಿಕೆಗಳನ್ನು ಪಡೆದಿಯುವ ಮುಂಚೆ ಪುರವಣಿ ಹೇಳಿಕೆಯನ್ನು ನೀಡಲು ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ. ಆರೋಪಿಗಳಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದಿದ್ದರೂ ಸಹ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಹೆ. ಜೆ ಎಂ ಎಫ್ ಸಿ ಕೊಪ್ಪಳ